# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

### ಸ್ಪೇಷಲ್ ಕೇಸ್ ನಂ. 142/2022

**ದೋ.ಸಾ. : 03 ಫ್ರಾ.ಸಾ. : 02**

| | | |
|---|---|---|
| ಸಾಕ್ಷಿಯ ಹೆಸರು | : | ರುಕ್ಮೀಣಿ ಸಂಜಯ ಬಾಗಡೆ |
| ಗಂಡನ ಹೆಸರು | : | ಸಂಜಯ ಬಾಗಡೆ |
| ವಯಸ್ಸು | : | 47 ವರ್ಷ |
| ಕೆಲಸ | : | ನಗರ ಸಭೆ ಸದಸ್ಯರು, ದಾಂಡೇಲಿ |
| ವಾಸ | : | ಆಶ್ರಯ ಕಾಲೋನಿ, ಗಾಂಧಿನಗರ, ದಾಂಡೇಲಿ |

**ದಿನಾಂಕಃ 27-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 26-08-2022 ರಂದು ದಾಂಡೇಲಿ ಪೊಲೀಸರು ನನ್ನನ್ನು ದಾಂಡೇಲಿಯ ಸರಕಾರಿ ಆಸ್ಪತ್ರೆಗೆ ಶವ ಪಂಚನಾಮೆಗಾಗಿ ಬರುವಂತೆ ನನಗೆ ನೋಟಿಸ್ ನೀಡಿದ್ದರು. ಅದರಂತೆ ನಾನು ಆಸ್ಪತ್ರೆಗೆ ಹೋಗಿದ್ದು, ಆಸ್ಪತ್ರೆಯ ಶವಗಾದಲ್ಲಿ ಮೃತೆ ಸುಶೀಲಾಳ ಶವವನ್ನು ನೋಡಿರುತ್ತೇನೆ. ಅಲ್ಲಿ ಚಾಸಾ-2, ಮೃತೆ ಸುಶೀಲಾಳ ಮಗಳಾದ ಚಾಸಾ-1 ರವರು ಇದ್ದು, ಶವವನ್ನು ಚಾಸಾ-1 ರವರು ನೋಡಿ ಗುರುತಿಸಿರುತ್ತಾರೆ. ನಾವು ಶವವನ್ನು ನೋಡಿದಾಗ ಆಕೆಯ ಮೈ ಮೇಲೆ ಸೀರೆ, ಬ್ಲೌಸ್ ಮತ್ತು ಲಂಗ ಇದ್ದವು, ಆಕೆಯ ಕುತ್ತಿಗೆಯ ಬಳಿ ಕಪ್ಪು ಬಣ್ಣದ ಬಿಗಿದ ಗುರುತು ಇತ್ತು ಹಾಗೂ ಕಾಲಿನ ಹಿಮ್ಮಡಿಗಳಿಗೆ ಗಾಯವಾಗಿ ರಕ್ತ ಬಂದಿತ್ತು. ಅಲ್ಲಿ ಪೊಲೀಸರು ನಮ್ಮ ಸಮಕ್ಷಮ ಶವ ಪಂಚನಾಮೆಯನ್ನು ಸಂಜೆ 04-30 ರಿಂದ 05-30 ರವರೆಗೆ ಶವ ಪಂಚನಾಮೆಯನ್ನು ಬರೆದು, ನಮ್ಮ ಸಹಿಯನ್ನು ಪಡೆದುಕೊಂಡರು ಹಾಗೂ ಪೋಟೋವನ್ನು ತೆಗೆದಿರುತ್ತಾರೆ. ಸಾಕ್ಷಿಯು ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲಕ್ಕೆ ತೆಗೆದ ನಿಪಿ-2 ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪೊಲೀಸರು ತನಗೆ ನೀಡಿದ ನೋಟಿಸ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

2. ದಿಃ 03-09-2022 ರಂದು ಪೊಲೀಸರು ನನ್ನನ್ನು ದಾಂಡೇಲಿಯ ಸಿ.ಪಿ.ಐ ಕಚೇರಿಗೆ ಪಂಚನಾಮೆಗಾಗಿ ಕರೆಸಿದ್ದರು ಹಾಗೂ ನೋಟಸ್ ನ್ನು ನೀಡಿದ್ದರು. ನಾನು ಠಾಣೆಗೆ ಹೋದಾಗ ಪೊಲೀಸ್ ಸಿಬ್ಬಂದಿಯೊಬ್ಬರು ಮೃತೆ ಸುಶೀಲಾಳ ವೈದ್ಯಕೀಯ ಪರೀಕ್ಷೆಯ ಕಾಲಕ್ಕೆ ಸಂಗ್ರಹಿಸಲಾದ ವಸ್ತುಗಳನ್ನು ಹಾಗೂ ಮೃತೆ ಸುಶೀಲಾಳು ಧರಿಸಿದ್ದ ಬಟ್ಟೆಗಳನ್ನು ತಂದು ಹಾಜರುಪಡಿಸಿದ್ದು, ಪೊಲೀಸರು ಅವುಗಳನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು, ಪಂಚನಾಮೆ ಮಾಡಿ, ಪೋಟೋ ತೆಗೆದರು ಹಾಗೂ ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಜಪ್ತು ಪಂಚನಾಮೆಯ ಕಾಲಕ್ಕೆ ರೆಹಮಾನ್ ಎನ್ನುವ ಪಂಚರು ಸಹ ಹಾಜರಿದ್ದರು. ವಸ್ತುಗಳನ್ನು ಜಪ್ತುಪಡಿಸಿಕೊಂಡಾಗ ಅವುಗಳ ಮೇಲೆ ಪೊಲೀಸರು ನಮ್ಮ ಸಹಿಯನ್ನು ಪಡೆದುಕೊಂಡರು. ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು, ಜಪ್ತು ಪಂಚನಾಮೆಯ ಕಾಲಕ್ಕೆ ತೆಗೆದ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಪೊಲೀಸರು ತನಗೆ ನೀಡಿದ ನೋಟಿಸ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಾದ 1 ರಿಂದ 3 ನ್ನು ಅಂದರೆ ಮೃತೆ ಸುಶೀಲಾಳು ಧರಿಸಿದ್ದ ಸೀರೆ, ಬ್ಲೌಸ್ ಮತ್ತು ಲಂಗವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಅವುಗಳ ಮೇಲೆ ಇರುವ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು-1(ಎ) ರಿಂದ ಮುದ್ದೆ ಮಾಲು -3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ವಿ.ಎ.ಟಿ. ವಕೀಲರಿಂದ**

3. ಶವ ಪಂಚನಾಮೆಗಾಗಿ ನಾನು ಆಸ್ಪತ್ರೆಗೆ ಹೋದಾಗ ಪೊಲೀಸರು ನಿಪಿ-3 ಶವ ಪಂಚನಾಮೆಯನ್ನು ಕೈಯಲ್ಲಿಯೇ ಬರೆದಿರುತ್ತಾರೆ. ಶವ ಪಂಚನಾಮೆಯಲ್ಲಿರುವ ಮಾಹಿತಿ ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸಾಕ್ಷಿಯು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಶವ ಪಂಚನಾಮೆಯು ಎಷ್ಟು ಪುಟಗಳಲ್ಲಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶವ ಪಂಚನಾಮೆಯಲ್ಲಿ ಎಷ್ಟು ಪ್ರಶ್ನೆಗಳು ಇದ್ದವು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶವ ಪಂಚನಾಮೆಯ ಪ್ರತಿ ಪುಟಗಳಲ್ಲಿ ಸಹಿ ಮಾಡಿದ್ದಿರಾ? ಎಂದರೆ ಸಾಕ್ಷಿಯುು ಒಂದು ಸಹಿಯನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

4. ಜಪ್ತು ಮಾಡಿದ ವಸ್ತುಗಳು ಪೊಲೀಸ್ ಠಾಣೆಯಲ್ಲಿಯೇ ಇದ್ದ ಕಾರಣ ಜಪ್ತು ಪಂಚನಾಮೆಯನ್ನು ಪೊಲೀಸ್ ಠಾಣೆಯಲ್ಲಿಯೇ ಮಾಡಿರುತ್ತಾರೆ ಎಂದರೆ ಸರಿ. ಜಪ್ತು ಮಾಡಿದ ವಸ್ತುಗಳಾದ ಮುದ್ದೆ ಮಾಲು-1 ರಿಂದ 3 ಗಳನ್ನು ನಾನು ಪ್ರಥಮ ಬಾರಿಗೆ ಪೊಲೀಸ್ ಠಾಣೆಯಲ್ಲಿಯೇ ನೋಡಿರುತ್ತೇನೆ ಎಂದರೆ ಸಾಕ್ಷಿಯು ಆಸ್ಪತ್ರೆಯ ಶವಗಾದಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಮುದ್ದೆ ಮಾಲು-1 ಸೀರೆ, ಮಿಶ್ರ ಬಣ್ಣದ್ದಾಗಿತ್ತು, ಮುದ್ದೆ ಮಾಲು-2 ಬ್ಲೌಸ್, ಕೇಸರಿ ಬಣ್ಣದ್ದಾಗಿತ್ತು, ಮುದ್ದೆ ಮಾಲು-3 ಲಂಗ, ಕಂದು ಬಣ್ಣದ್ದಾಗಿತ್ತು ಎಂದು ನುಡಿಯುತ್ತಾರೆ. ವೈದ್ಯಕೀಯ ಪರೀಕ್ಷೆಯ ಕಾಲಕ್ಕೆ ಸಂಗ್ರಹಿಸಿದ ವಸ್ತುಗಳನ್ನು ನನಗೆ ಹೇಳಲಾಗುವುದಿಲ್ಲ. ಪಂಚನಾಮೆಗಳನ್ನು ಇದೇ ರೀತಿ ಬರೆಯಬೇಕೆಂದು ನಾನು ಪೊಲೀಸರಿಗೆ ಹೇಳಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ಓದಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

5. ನಿಪಿ-4 ನೋಟಿಸ್ ನಲ್ಲಿ ಪೊಲೀಸರು ಯಾವ ದಿನದಂದು, ಯಾವ ಸಮಯಕ್ಕೆ , ಎಲ್ಲಿಗೆ ಮತ್ತು ಯಾವ ಕಾರಣಕ್ಕಾಗಿ ಬರಬೇಕೆಂದು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-7 ನೋಟಿಸ್ ನಲ್ಲಿಯೂ ಸಹ ಪೊಲೀಸರು ಯಾವ ದಿನದಂದು, ಯಾವ ಸಮಯಕ್ಕೆ , ಎಲ್ಲಿಗೆ ಮತ್ತು ಯಾವ ಕಾರಣಕ್ಕಾಗಿ ಬರಬೇಕೆಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಪೊಲೀಸರು ನಮ್ಮಿಂದ ಬಿಳಿ ಹಾಳೆಗಳ ಮೇಲೆ ಸಹಿಯನ್ನು ಪಡೆದುಕೊಂಡು ನಿಪಿ-3 ಮತ್ತು 5 ಪಂಚನಾಮೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶವ ಪಂಚನಾಮೆಯ ಕಾಲಕ್ಕೆ ಶವದ ಮರಣೋತ್ತರ ಪರೀಕ್ಷೆ ಮಾಡಿರುವುದಿಲ್ಲ. ಸದರಿ ಶವವು ಸುಶೀಲಾಳದೆ ಎಂದು ಹೇಳಲು ಚಾಸಾ-1 ರವರು ಹೇಳಿದ್ದನ್ನು ಬಿಟ್ಟರೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆ ಹಾಗೂ ಜಪ್ತು ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಶವವನ್ನು ನೋಡಿದಾಗ ಶವದ ಕುತ್ತಿಗೆಯ ಹತ್ತಿರ ಯಾವುದೇ ಕಪ್ಪು ಗುರುತು ಇರಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಎಲ್.ಎ.ಡಿ.ಸಿ ವಕೀಲರಿಂದ**

2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 1 ನೇ ಆರೋಪಿ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ